ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 9 ಸೇನಿಸೇ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 10.12.2015

# ಸುತ್ತೋಲೆ

ವಿಷಯ: ಗೆಜೆಟೆಡ್ ಅಧಿಕಾರಿಗಳ ರಜೆ ನಿರ್ವಹಣೆ ಮತ್ತು 2015ರ ಕ್ಯಾಲೆಡರ್ ವರ್ಷದ ಗಳಿಕೆ ರಜೆ ನಗದೀಕರಣದ ಕುರಿತು

ಉಲ್ಲೇಖ: (1)ಮಹಾಲೇಖಪಾಲರ ಪತ್ರ ಸಂಖ್ಯೆ:ಜಿಎಂ/ಜನರಲ್/ ಹೆಚ್‌ಆರ್‌ಎಂಎಸ್/ 2015-16/34-36 ದಿನಾಂಕ 26.5.2015

(2) ಮಹಾಲೇಖಪಾಲರ ಪತ್ರ ಸಂಖ್ಯೆ:ಜಿಎಂ/ಜನರಲ್/ಹೆಚ್‌ಆರ್‌ಎಂಎಸ್/ 2015-16/146 ದಿನಾಂಕ 2.11.2015

********

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 175ರ ಪ್ರಕಾರ ಪತ್ರಾಂಕಿತ ಸರ್ಕಾರಿ ನೌಕರರ ರಜೆ ಲೆಕ್ಕವನ್ನು ಮಹಾಲೇಖಪಾಲರು ನಿರ್ವಹಿಸಬೇಕಾಗುತ್ತದೆ. ನಿಯಮ 190 ರಿಂದ 196 ರಲ್ಲಿ ತಿಳಿಸಿರುವಂತೆ ರಜೆ ಮಂಜೂರು ಮಾಡುವ ಪ್ರಾಧಿಕಾರಗಳು ರಜೆ ಲೆಕ್ಕದ ಬಗ್ಗೆ ಮಹಾಲೇಖಪಾಲರಿಂದ ಮಾಹಿತಿಯನ್ನು ಪಡೆದ ನಂತರವೇ ರಜೆ ಮಂಜೂರು ಮಾಡಬೇಕಾಗುತ್ತದೆ. ಪ್ರಸ್ತುತ ಹೆಚ್.ಆರ್.ಎಂ.ಎಸ್ ವ್ಯವಸ್ಥೆಯಡಿ ಎಲೆಕ್ಟ್ರೋನಿಕ್ ಮಾಧ್ಯಮದಲ್ಲಿ ರಜೆ ಲೆಕ್ಕವೂ ಸೇರಿದಂತೆ ಅಧಿಕಾರಿ/ನೌಕರರ ಸೇವಾ ವಿಚಾರಗಳನ್ನು ನಿರ್ವಹಿಸುವುದರಿಂದ, ಈ ವ್ಯವಸ್ಥೆಯ ಉಪಯೋಗವನ್ನು ಪಡೆದುಕೊಂಡು ಆನ್‌ಲೈನ್ ಮೂಲಕ ರಜೆ ಲೆಕ್ಕಾಚಾರ ನಿರ್ವಹಣೆ ಮಾಡಲು ಮಹಾಲೇಖಪಾಲರು ಉದ್ದೇಶಿಸಿದ್ದಾರೆ.

ಮುಂದುವರೆದಂತೆ ಪ್ರಸಕ್ತ 2015ರ ಕ್ಯಾಲೆಂಡರ್ ಅವಧಿಯ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಅಧಿಕಾರಿಗಳು ಪಡೆಯಬೇಕಾಗಿರುವುದರಿಂದ ಈ ಸಂಬಂಧದಲ್ಲಿ ಗಳಿಕೆ ರಜೆ ಲೆಕ್ಕದ ಕುರಿತು ಮಹಾಲೇಖಪಾಲರಿಂದ ವರದಿ ಪಡೆಯುವಲ್ಲಿನ ವ್ಯವಹರಣೆಗಳಿಂದ ಆಗುವ ವಿಳಂಬದಿಂದಾಗಿನ ಅನಾನುಕೂಲಗಳನ್ನು ತಡೆಯಲು, ಮಹಾಲೇಖಪಾಲರಿಂದ ರಜೆ ಲೆಕ್ಕ ನಿರೀಕ್ಷಿಸದೆ ಹೆಚ್.ಆರ್.ಎಂ.ಎಸ್. ನಲ್ಲಿ ಲಭ್ಯವಾಗುವ ರಜೆ ಲೆಕ್ಕಚಾರವನ್ನು ಗಮನದಲ್ಲಿರಿಸಿ, ಗಳಿಕೆ ರಜೆ ನಗದೀಕರಣಕ್ಕೆ ಸಕ್ಷಮ ಪ್ರಾಧಿಕಾರಿಗಳು ಅನುಮತಿ ನೀಡಲು ಸೂಚನೆ ನೀಡಬೇಕೆಂದು ಮತ್ತು ಮಹಾಲೇಖಪಾಲರ ಕಛೇರಿಯು ರಜೆ ಲೆಕ್ಕಾಚಾರದ ಬಗ್ಗೆ ಪರಿಶೀಲನೆ ನಡೆಸಿ ಯಾವುದೇ ತಪ್ಪುಗಳು ಕಂಡು ಬಂದಲ್ಲಿ ರಜೆ ಪ್ರಾಧಿಕಾರದ ಗಮನಕ್ಕೆ ತರುವುದಾಗಿ ಉಲ್ಲೇಖಿತ ಪತ್ರದಲ್ಲಿ ಮಹಾಲೇಖಪಾಲರು ಸರ್ಕಾರವನ್ನು ಕೋರಿದ್ದಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ಸಾಲಿನ ಗಳಿಕೆ ರಜೆ ನಗದೀಕರಣದ ಸೌಲಭ್ಯ ಮಂಜೂರಾತಿ ಪರಿಗಣನೆ ಸಂಬಂಧದಲ್ಲಿ ಗೆಜೆಟೆಡ್ ಅಧಿಕಾರಿಗಳಿಗೆ ಉಂಟಾಗುವ ವಿಳಂಬವಾಗುವುದನ್ನು ತಪ್ಪಿಸಲು ಉಲ್ಲೇಖ(2)ರ ಪತ್ರದನುಸಾರ ಮಹಾಲೇಖಪಾಲರು ಕೋರಿರುವಂತೆ, ಹೆಚ್.ಆರ್.ಎಂ.ಎಸ್.ನಲ್ಲಿ ಲಭ್ಯವಿರುವ ಅಧಿಕಾರಿಗಳ ಗಳಿಕೆ ರಜೆ ಲೆಕ್ಕಾಚಾರದ ಆಧಾರದ ಮೇಲೆ ಗಳಿಕೆ ರಜೆ ನಗದೀಕರಣವನ್ನು ಮಂಜೂರು ಮಾಡಲು ರಜೆ ಮಂಜೂರಾತಿ ಪ್ರಾಧಿಕಾರಿಗಳು ಕ್ರಮ ವಹಿಸುವಂತೆ ಸೂಚಿಸಲಾಗಿದೆ. ಮತ್ತು ಮಹಾಲೇಖಪಾಲರು ಲೆಕ್ಕಾಚಾರದ ಬಗ್ಗೆ ತಪ್ಪುಗಳನ್ನು ತಿಳಿಸಿದಲ್ಲಿ ಅದನ್ನು ಸರಿಪಡಿಸಿ ಅದರ ಅನ್ವಯ ಆರ್ಥಿಕ ಸೌಲಭ್ಯ ಮಂಜೂರು ಮಾಡಬೇಕೆಂದು ಸಹ ತಿಳಿಸಲಾಗಿದೆ.

(ಜಿ.ಬಿ.ಹೇಮಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿ ಕಳುಹಿಸಿದೆ.

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ.
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ, ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಆರಣ್ಯ ಲೆಕ್ಕಪರಿಶೋಧನೆ), ಬೆಂಗಳೂರು
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.

. . . . . ಪುಟ-3

11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ಪ್ರಾಜೆಕ್ಟ್ಆಫೀಸರ್, ಹೆಚ್.ಆರ್.ಎಂ.ಎಸ್, ಕೊಠಡಿ ಸಂಖ್ಯೆ:145-ಎ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
17. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
18. ಕರ್ನಾಟಕ ಸರ್ಕಾರಿ ಸಚಿವಾಲಯದ ಗ್ರಂಥಾಲಯ: ವಿಧಾನ ಮಂಡಲದ ಗ್ರಂಥಾಲಯ.
19. ವಾರಪತ್ರ/ಶಾಖೆಯ ರಕ್ಷಾ ಕಡತ.

[ಕ್ರಮ ಸಂಖ್ಯೆ:7 ರಿಂದ 16 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ]. ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ WWW.finance.kar.nic.in.

GM/Genl/HRMS/2015-16/146-147

Date: 2nd November 2015
03

TO

The Secretary to Government of Karnataka,
Finance Department (Services-1),
Karnataka Government Secretariat,
Bengaluru – 1.

Sir,

Sub;: Maintenance of leave account and Availment of Surrender Leave Benefit by the Gazetted Officers for the year 2015.

A reference is invited to this office letter no: GM/Genl/HRMS/2015-16/34-36 dt.26-5-15 regarding maintaining the leave account of the Gazetted Officers integrating with HRMS( Copy of the letter is enclosed for ready reference). This office has already uploaded to HRMS database the balance of leave (EL & HPL) of the Gazetted Officers served by this office, as on 31-12-14, and advance credits for January 2015. In this regard, it is stated that the Gazetted Officers who want to avail surrender leave encashment benefit for the year 2015, will have to avail the benefit within two months i.e., before December 2015.Instead of the existing procedure of sending the leave applications for leave title to this office and again communicating the sanction based on leave title, the sanctioning authorities may be instructed to access the Leave Report of HRMS to ascertain the leave balance at the credit of the officers, and communicate the sanction to this office. This office will verify the correctness of the leave sanctioned and any discrepancies noticed will be brought to the notice of the sanctioning authorities for taking necessary /corrective action.

Considering the time limit and to avoid hardship to the Officers, it is requested to kindly issue necessary orders in this regard for two months (November and December 2015) to the sanctioning authorities, DDOs and HRMS.

Yours faithfully,
2/11
DEPUTY ACCOUNTANT GENERAL (GE)

Copy to

Chief Executive Officer
Centre for e- Governace- for information and necessary action

Despatched on 3/11/2015